# ಮಾನವಿ ತಾಲೂಕಿನ ತಾಯಿ ಮಗುವಿನ ರಕ್ಷಣೆ ಮತ್ತು ಪೋಷಣೆ ಅಭಿಯಾನ





ವಿಮುಕ್ತಿ ಚಾರಿಟೇಬಲ್ ಟ್ರಸ್ಟ್ (ರಿ,) ಪೋತ್ನಾಳ್

# ಗ್ರಾಮ ಮಟ್ಟದ ಜನವೇದಿಕೆಗಳ ರಚನೆ







# ಜನವೇದಿಕೆ ಸದಸ್ಯರೊಂದಿಗೆ ಅಭಿಯಾನದ ಕುರಿತು ಚರ್ಚೆ









# ಗರ್ಭಿಣಿ ಬಾಣಂತಿಯರಿಗೆ ಅಂಗನವಾಡಿ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ





# ಗರ್ಭಿಣಿಯರ ಮತ್ತು ಬಾಣಂತಿಯರ ಸರ್ವೆ

- ಮೂರು ಸಂಸ್ಥೆಗಳ ಸಹಯೋಗದಲ್ಲಿ ಅಪೌಷ್ಟಿಕ ಮಕ್ಕಳ ವರದಿಯನ್ನಾದರಿಸಿ ಗ್ರಾಮಗಳಲ್ಲಿ ಅಪೌಷ್ಟಿಕ ಮಕ್ಕಳ ಮನೆ ಭೇಟಿ ನೀಡುವದು.








# ಗರ್ಭಿಣಿ ಬಾಣಂತಿಯರ ಸರ್ವೆ











# ಗ್ರಾಮಗಳಲ್ಲಿ ಗರ್ಭಿಣಿಯರು ಮತ್ತು ಬಾಣಂತಿಯರು ಅನುಭವಿಸುತ್ತಿರುವ ಸಮಸ್ಯೆಗಳು






# ಅಭಿಯಾನಗಳ ಪೂರ್ವಭಾವಿ ಸಭೆ

# ಗ್ರಾಮ ಮಟ್ಟದ ಅಭಿಯಾನ











# ಗ್ರಾಮ ಮಟ್ಟದ ಅಭಿಯಾನ











# ಲೋಕ್ ಮಂಚ್ ನಾಯಕರಿಗೆ ಮತ್ತು ಜನವೇದಿಕೆ ಸದಸ್ಯರಿಗೆ ಅಭಿಯಾನದ ಭಾಗವಹಿಸಲು ಕರೆ ನೀಡುವದು





- ತಾಯಿ ಮಗುವಿನ ಪೋಷಣೆ ರಕ್ಷಣೆ ಅಭಿಯಾನದ ನಿಮಿತ್ತ ಮಾನವಿ ಯೂನಿಟ್ ಕಾರ್ಯಕ್ಷೇತ್ರಗಳಿಗೆ ಒಳಪಡುವಂತ 41 ಹಳ್ಳಿಗಳ ಸುಮಾರು 461 ತಾಯಂದಿರ ಸಂದರ್ಶನ ನಡೆಸಿ ಸಮಿಕ್ಷೆಯಲ್ಲಿ ಗುರುತಿಸಲಾದ ಸಮಸ್ಯೆಗಳು ಹಾಗೂ ಆರೋಗ್ಯ ವ್ಯವಸ್ಥೆಯಲ್ಲಿನ ಗೊಂದಲಗಳನ್ನು ಸರಿಪಡಿಸಲು ಜೊತೆಗೆ ತಾಯಿ ಮಗುವಿನ ಸಮಗ್ರ ಆರೋಗ್ಯದೆಡೆಗೆ ಕಟ್ಟುತ್ತಿರುವ ಅಭಿಯಾನದಲ್ಲಿ ಭಾಗವಹಿಸಲು ಜನವೇದಿಕೆ ಸದಸ್ಯರುಗಳಿಗೆ ಪ್ರೇರೆಪಿಸುವದು.

# ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ಜನಸಂಪರ್ಕ ಸಭೆಗಳು










ಜನ ಸಂಪರ್ಕ ಸಭೆ


ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದ





# ಜನವೇದಿಕೆ ಸದಸ್ಯರಿಂದ ಅಂಗನವಾಡಿಗಳ ಮೇಲ್ವಿಚಾರಣೆ









# ತಾಯಿ ಕಾರ್ಡ್, ಪಿಎಚ್.ಸಿ. ಉಪಕೇಂದ್ರ ಮೇಲುಸ್ತುವಾರಿ ತರಬೇತಿ



- ಜನವೇದಿಕೆ ಸದಸ್ಯೆರಿಗೆ ಲೋಕಮಂಚ್ ನಾಯಕರಿಗೆ ಮತ್ತು ಊರಿನ ಗರ್ಭಿಣಿ ಮಹಿಳೆಯರಿಗೆ ಹಾಗೂ ಸಂಘದ ಮಹಿಳೆಯರಿಗೆ ತಾಯಿಕಾರ್ಡ, ಪ್ರಾಥಮಿಕ ಆರೋಗ್ಯ ಕೇಂಧ್ರದ ಬಗ್ಗೆ ಮತ್ತು ಉಪಕೇಂಧ್ರಗಳಲ್ಲಿ ದೊರೆಯುವಂತಹ ಸೌಲಭ್ಯಗಳ ಬಗ್ಗೆ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು.





# ಹೆರಿಗೆಯ ಸಮಯದಲ್ಲಿ ಮರಣಹೊಂದಿದ ತಾಯಂದಿರು





## ಬಾಣಂತಿ ಸಾವು, ವೈದ್ಯರ ನಿರ್ಲಕ್ಷ

ಪೋತ್ನಾಳ.ಜು.೨೮- ಸಮೀಪದ ಉದ್ಬಾಳ ಗ್ರಾಮದ ಶ್ರೀ ಮತಿ ಬಸವಲಿಂಗಮ್ಮ 22ವಯಸ್ಸಿನ ಎಂಬ ಬಾಣಂತಿ ದಿನಾಂಕ 20 ರಂದು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಮಹಿಳೆ.

ಇವರನ್ನು ದಿನಾಂಕ 13 ರಂದು 4-30 ಕ್ಕೆ ಹೆರಿಗಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ ಪೋತ್ನಾಳಗೆ ಅಂಬುಲೆನ್ಸ್ ಮೂಲಕ ಕರೆದುಹೋಗಲಾಗಿತ್ತು.ಅಲ್ಲಿ ಹೆರಿಗೆ ಆಗುವುದಿಲ್ಲ ತೋಂದರೆ ಇದೆ ಎಂದು ಅಲ್ಲಿಂದ ಸಿಂಧನೂರು ತಾಲೂಕಿನ ಸಾರ್ವಜನಿಕ ಆರೋಗ್ಯ ಕೇಂದ್ರ ಕ್ಕೆ ಕಳಿಸಲಾಗುತ್ತದೆ.

ಅಲ್ಲಿ ಕೂಡ ಹೆರಿಗೆ ಆಗುವುದು ಕಷ್ಟ ಎಂದು ವೈದ್ಯರು ಬೇರೆ ಕಡೆಗೆ ಹೋಗಲು ತಿಳಿಸಿದಾಗ, ಕುಟುಂಬದವರಿಗೆ ಭಯ ಬಂದು [illegible] ಖಾಸಗಿ ಆಸ್ಪತ್ರೆಗೆ ಹೋಗಿದ್ದಾರೆ. ಅಲ್ಲಿನ ವೈದ್ಯರು ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆ ಮಾಡಿದ್ದಾರೆ. 5 ದಿನ ಚೆನ್ನಾಗಿ ಇದ್ದ ನಂತರ 6 ನೆ ದಿನಗಳಲ್ಲಿ ಆರೋಗ್ಯದಲ್ಲಿ ಏರು ಪೇರು ಆದಾಗ ಚಿಕಿತ್ಸೆ ನೀಡಲಾಗುತ್ತದೆ. ಹತೋಟಿಗೆ ಬರದ ಕಾರಣ 35000, ರೂ ಬಿಲ್ಲನ್ನು ಪಡೆದುಕೊಂಡು ಆಕೆಯನ್ನು ರಾಯಚೂರಿನ ರಿಮ್ಸ್‌ಗೆ ಕಳಿಸಲಾಗಿದೆ.ಅಲ್ಲಿ ಚಿಕಿತ್ಸೆ ಫಲಕಾರಿ ಯಾಗದೆ ಅವರು ಸಾವನ್ನಪ್ಪಿದ್ದಾರೆ.ಇದಕ್ಕೆ ಕಾರಣ ಯಾರು. ಮೊದಲೇ ತಾಯಿ ಕಾರ್ಡಲ್ಲಿ ತೊಂದರೆ ಇರುವುದು ವೈದ್ಯರು ಬರೆದಿರುತ್ತಾರೆ.ಅದನ್ನು ಗಮನಿಸಿದ ಸಂಬಂಧ ಪಟ್ಟ ಸಿಬ್ಬಂದಿಗಳು ಹೆರಿಗೆ ಮುಂಚಿತವಾಗಿ ಗರ್ಭಿಣಿಯನ್ನು ಮೊದಲೇ

ದಾಖಲೆ ಮಾಡಬಹುದಿತ್ತು,ಆದರೆ ಯಾವುದೇ ರೀತಿಯ ಕಾಳಜಿ ತೆಗೆದು ಕೊಳ್ಳದೆ ನಿರ್ಲಕ್ಷ್ಯ ತೋರಿದ ವೈದ್ಯರ ಹಾಗೂ ಸಿಬ್ಬಂದಿಗಳ ವಿರುದ್ಧ ಉನ್ನತ ಅಧಿಕಾರಿಗಳು ತನಿಖೆ ನಡೆಸಿ, ತಪ್ಪಿತಸ್ಥರನ್ನು ಅಮಾನತು ಮಾಡಿ, ಮತ್ತು ಸರಕಾರ, ಕುಟುಂಬದವರಿಗೆ ನ್ಯಾಯ ದೊರಕಿಸಿ ಪರಿಹಾರ ನೀಡಬೇಕು.



# ಲೋಕಮಂಚ್ ಹಾಗೂ ಜನವೇದಿಕೆ ಸದಸ್ಯರಿಂದ ತಾಯಿ ಮತ್ತು ಶಿಶು ಮರಣ ತಡೆಗಟ್ಟಲು ಅಧಿಕಾರಿಗಳಿಗೆ ಮನವಿ ಸಲ್ಲಿಸುವದು.







## ತಾಯಿ, ಶಿಶು ಮರಣ ಪ್ರಮಾಣ ತಡೆಯಲು ಆಗ್ರಹಿಸಿ ಮನವಿ

**ದುಡಿಮೆ ನ್ಯೂಸ್‌ಲೈನ್**

**ರಾಯಚೂರು,ಸೆ.24**-ಜಿಲ್ಲೆಯಲ್ಲಿ ಹೆಚ್ಚುತ್ತಿರುವ ತಾಯಿ, ಶಿಶು ಮರಣಗಳ ಪ್ರಮಾಣ ತಡೆಗಟ್ಟಬೇಕೆಂದು ಆಗ್ರಹಿಸಿ ತಾಯಿ ಮತ್ತು ಮಗುವಿನ ರಕ್ಷಣೆ ಹಾಗೂ ಪೋಷಣೆ ಅಭಿಯಾನ ಮಾನ್ವಿ ಸಂಘಟನೆಯಿಂದ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಜಿಲ್ಲೆಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗ ಹಿನ್ನಲೆಯಲ್ಲಿ ತಾಯಿ, ಶಿಶು ಮರಣ ಪ್ರಮಾಣ ಹೆಚ್ಚುತ್ತಿರುವುದು ಖೇದಕರ ಸಂಗತಿ, ಮಾನ್ವಿ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಏಪ್ರೀಲ್ ನಿಂದ ಜುಲೈ ಅಂತ್ಯದವರೆಗೆ ಐವರು ತಾಯಿಂದರು ಮೃತಪಟ್ಟಿದ್ದಾರೆ. ಗರ್ಭಿಣಿಯರಿಗೆ ಗುಣಮಟ್ಟದ ಪ್ರಸವ ಪೂರ್ವ ಆರೈಕೆ ದೊರಕುತ್ತಿಲ್ಲ ಇದರಿಂದ ಮೃತರ ಪ್ರಮಾಣ ಹೆಚ್ಚಾಗಿದೆ.

ಮಾನ್ವಿ, ಸಿಂಧನೂರು ತಾಲೂನಿಲ್ಲಿ ಸ್ಕ್ಯಾನಿಂಗ್ ಕೇಂದ್ರದ ವ್ಯವಸ್ಥೆ ಮಾಡಬೇಕು ಹಾಗೂ ಗರ್ಭಿಣಿ ಮಹಿಳೆಯರಲ್ಲಿ ಬಾರಿ ಪ್ರಮಾಣದ ರಕ್ತಹೀನತೆ ನಿಯಂತ್ರಿಸಬೇಕು ಮತ್ತು ನಗು- ಮಗು ಆಂಬುಲೆನ್ಸ್ ವಾಹನ ಮಹಿಳೆಯರ ನೆರವಿಗೆ ಧಾವಿಸಬೇಕು ಸೇರಿದಂತೆ ಇನ್ನಿತರ ವಿವಿಧ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಾಲಿಯಲ್ಲಪ್ಪ, ಯಲ್ಲಮ್ಮ, ಸಂಗಮ್ಮ, ಅಯ್ಯಮ್ಮ, ವಿಜಯಲಕ್ಷ್ಮಿ, ಈರಮ್ಮ, ಅಂಬಮ್ಮ, ಯಲ್ಲಮ್ಮ, ಹನುಮಂತ, ವೀರೇಶ, ರವೀಂದ್ರ, ಚಂದ್ರು ಇತರರು ಇದ್ದರು.













# ಮರಣ ಹೊಂದಿದ ತಾಯಂದಿರ ಮನೆ ಭೇಟಿ





# ಜನವೇದಿಕೆಯವರಿಂದ ಪತ್ರಿಕಾ ಗೋಷ್ಠಿಯ ಪೂರ್ವಭಾವಿ ಸಭೆ.







# ಪತ್ರಿಕಾ ಗೋಷ್ಠಿಯ ವರದಿ...






## ತಾಯಿ,ಶಿಶು ಮರಣ ತಪ್ಪಿಸುವಲ್ಲಿ ವೈದ್ಯಾಧಿಕಾರಿಗಳು ಸಿಡಿಪಿಓ ವಿಫಲ ಕ್ರಮಕ್ಕೆ ಜನವೇದಿಕೆ ಒತ್ತಾಯ

**ಮಾನ್ವಿ,ಮಾ.01-** ಗರ್ಭೀಣಿಯರು ಹಾಗೂ ಬಾಣಂತಿಯರು ಮತ್ತು ಮಕ್ಕಳಿಗೆ ಪೌಷ್ಠಿಕ ಆಹಾರ ಪೂರೈಕೆಯಲ್ಲಿ ತಾರತಮ್ಯ ನೀತಿ ಹಾಗೂ ತಾಯಿ.ಶಿಶು ಮರಣ ತಪ್ಪಿಸುವಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಮತ್ತು ಅಂಗನವಾಡಿ ಕೇಂದ್ರಗಳಿಂದ ಸಮರ್ಪಕವಾಗಿ ಆಹಾರ ನೀಡುತ್ತಿಲ್ಲವಾದ ಕಾರಣ ತಾಯಿ ಮತ್ತು ಶಿಶು ಮರಣಗಳು ಜಾಸ್ತಿಯಾಗುತ್ತಿದ್ದು ವೈದ್ಯರು ಮತ್ತು ಸಿಡಿಪಿಓ ಇವರ ವಿರುದ್ಧ ಕ್ರಮಕ್ಕೈಗೊಳ್ಳಬೇಕೆಂದು ಜನವೇದಿಕೆಯ ಮಹಿಳಾ ಸಂಘಟನೆ ಒತ್ತಾಯಿಸಿದೆ

ಸೋಮುವಾರ ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ ಗರ್ಭೀಣಿ ಸ್ತ್ರೀಯರಿಗೆ ಅಂಗನವಾಡಿ ಕೇಂದ್ರಗಳಲ್ಲಿ ತತ್ತಿ, ಸೇರಿದಂತೆ ಇನ್ನಿತರ ಪೌಷ್ಠಿಕ ಆಹಾರದ ಕಾಳುಗಳನ್ನು ವಿತರಿಸಬೇಕೆಂಬ ನಿಯಮವಿದೆ ಆದರೆ ಅಂಗನವಾಡಿಯವರು ಸರಿಯಾದ ರೀತಿಯಲ್ಲಿ ವಿತರಣೆ ಮಾಡುತ್ತಿಲ್ಲ. ಬಾಣಂತಿಯರಿಗೆ ಹಾಗೂ ಅಂಗನವಾಡಿ ಮಕ್ಕಳಿಗೆ ಒಂದು ದಿನಕ್ಕೆ ಏನೇನೂ...? ಮತ್ತು ಎಷ್ಟೇಷ್ಟು ಕೊಡಬೇಕೆಂಬ ನಿಯಮವಿದೆ ಅದನ್ನು ಅಂಗನವಾಡಿ ಕೇಂದ್ರದಲ್ಲಿ ಗೋಡೆಗೆ ಬರೆಯಬೇಕು ಅಥವಾ ನೇತು ಹಾಕಬೇಕು ಆದರೆ ಸಿಡಿಪಿಓರವರು ಇದುವರೆಗೂ ಯಾವ ಅಂಗನವಾಡಿ ಕೇಂದ್ರದಲ್ಲಿಯೂ ಲಿಸ್ಟ್ ಹಾಕಿಸಿಲ್ಲ ಮತ್ತು ತೂಕದ ಪ್ರಕಾರ ಆಹಾರದ ಧಾನ್ಯವನ್ನು ವಿತರಣೆ ಮಾಡದೆ ಮೋಸವೆಸಗುತ್ತಿದ್ದಾರೆ ಅಂಗನವಾಡಿ ಶಿಕ್ಷಕರು ಸರಿಯಾಗಿ ಶಾಲೆಗೆ ಬರುತ್ತಿಲ್ಲ ಕೇವಲ ಸಹಾಯಕಿಯವರಿಗೆ ಜವಬ್ದಾರಿ ವಹಿಸಿ ನುಣಚಿಕೊಳ್ಳುತ್ತಾರೆ ಗರ್ಭೀಣಿಯರ ಮನೆಗೆ ಪೌಷ್ಠಿಕ ಆಹಾರವನ್ನು ನೀಡಬೇಕೆಂಬ ನಿಯವಿದ್ದರೂ ಕಾಟಾಚಾರಕ್ಕೆ ಅವರನ್ನು ಕರೆಸಿ ಭಿಕ್ಷೆ ನೀಡುವ ರೀತಿಯಲ್ಲಿ ಅಲ್ಪ ಸ್ವಲ್ಪ ಕೊಟ್ಟು ಕಳುಹಿಸುತ್ತಾರೆ ಏನಾದರೂ ಕೇಳಿದರೆ ಸರಕಾರದಿಂದ ಬಂದಿರುವುದೇ ಇಷ್ಟೇ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಹೇಳುತ್ತಾರೆ ಸರಿಯಾಗಿ ಗರ್ಭೀಣಿಯರಿಗೆ ಪೌಷ್ಠಿಕ ಆಹಾರ ಸಿಗದ ಕಾರಣ ತಾಯಿ ಮತ್ತು ಮಗುವಿನ ಬೆಳವಣಿಗೆ ಕುಂಠಿತವಾಗಿ ಸಾವು ಸಂಭವಿಸುವ ಸಂಭವವಿರುತ್ತದೆ. ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಗರ್ಭಿಣಿಯರ ರಕ್ತಹೀನತೆಯ ಕೊರತೆಯ ವಿಷಯವನ್ನು ತಾಯಿ ಕಾರ್ಡಿನಲ್ಲಿ ಸರಿಯಾಗಿ ನಮೂದಿಸದ ಕಾರಣ ಹೆರಿಗೆಯ ಸಮಯದಲ್ಲಿ ಸಾವು ಸಂಭವಿಸುವ ಸಂದರ್ಭವಿರುತ್ತದೆ ಹೀಗಾಗಿ ಪೌಷ್ಠಿಕ ಆಹಾರ ಸರಿಯಾಗಿ ವಿತರಿಸದ ಅಂಗನವಾಡಿ ಇಲಾಖೆ ಆರೋಗ್ಯದ ಬಗ್ಗೆ ಸರಿಯಾಗಿ ಕಾಳಜೀ ವಹಿಸದ ವೈದ್ಯರ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮಾತೃಪೂರ್ಣ ಯೋಜನೆಯಡಿಯಲ್ಲಿ ಕಳೆದ 7 ತಿಂಗಳುಗಳಿಂದ ಆಹಾರ ಧಾನ್ಯಗಳ ವಿತರಣೆ ಮಾಡದಿರುವುದು ಸೇರಿದಂತೆ ಅಂಗನವಾಡಿ ಕೇಂದ್ರಗಳಿಂದ ನಡೆಯುತ್ತಿರುವ ಆಹಾರ ಪೂರೈಕೆಯಲ್ಲಿ ಆಗುತ್ತಿರುವ ಅಕ್ರಮಗಳ ಕುರಿತು ಸೂಕ್ತ ತನಿಖೆಯನ್ನು ಕೈಗೊಂಡು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮಾಹಿತಿ ಫಲಕ ಅಳವಡಿಕೆ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್, ಅಂಬ್ಯುಲೆನ್ಸ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸುವುದು ಸೇರಿದಂತೆ ತಾಯಿ ಮತ್ತು ಮಗುವಿನ ಪೋಷಣಾ ಅಭಿಯಾನದ ಮೂಲಕ ವಿವಿಧ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆಗಳ ಕುರಿತು ವರದಿಯನ್ನು ರಚಿಸಿ ಸಂಬಧಂಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ನೀಡಲಾದ ಸಮಗ್ರ ಮಾಹಿತಿ ಪ್ರಕಾರ ಸವಲತ್ತುಗಳನ್ನು ಒದಗಿಸಬೇಕೆಂದು ಒತ್ತಾಯಿಸಿದರು.



# ಲೋಕಮಂಚ್ ಹಾಗೂ ಜನವೇದಿಕೆ ಸದಸ್ಯರಿಂದ ಅಂಗನವಾಡಿ ಕೇಂದ್ರ್ರಗಳಲ್ಲಿ ಆಹಾರ ವಿತರಣಾ ಫಲಕ ಪಟ್ಟಿಯನ್ನು ಅಳವಡಿಸುವ ಬಗ್ಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸುವದು.








## ಪೌಷ್ಠಿಕ ಅಹಾರ ನೀಡುವಂತೆ ಬಾಣಂತಿಯರ ಆಗ್ರಹ

ಪ್ರಜಾ ಸಾಕ್ಷಿ ವರದಿ

**ಪೋತ್ನಾಳ :** ರಾಜ್ಯ ಸರಕಾರದ ಮಹಾಕಾಂಕ್ಷಿ ಯೋಜನೆಯಾದ ಮಾತ್ರಪೂರ್ಣಯೋಜನೆ ಲಾಕ್ ಡೌನ್ ನೆಪದಲ್ಲಿ ಹಳ್ಳ ಹಿಡಿವ ಅಂತ ತಲಿದೆ ಗರ್ಭಿಣಿಯರಿಗೆ ಬಾಣಂತಿಯರಿಗೆ ಸರಿಯಾದ ಆಹಾರ ದಾನ್ಯ ನೀಡದೆ ಸರಕಾರ ನಿರ್ಲಕ್ಷತೋರಿದೆ ತೋರಣದಿನ್ನಿ .ಪೋತ್ನಾಳ ಭಾಗದ ಹಳ್ಳಿಗಳಲ್ಲಿ ಅಂಗನವಾಡಿ ಕೇಂದ್ರಕ್ಕೆಬಿಡುಗಡೆ ಮಾಡುವಂತೆ ಗರ್ಭಿಣಿ ಮತ್ತು ಬಾಣಂತಿಯರಿಗೆ .ಮಾತ್ರಪೂರ್ಣ ಯೋಜನೆಯನೆ ಬರುವ 0–3ವರ್ಷ 3ವರ್ಷದಿಂದ 6 ವರ್ಷ ಮಕ್ಕಳಿಗೆ ನೀಡುವಂತಹ ಆಹಾರ ದಾನ್ಯಗಳು,ಮೊಟ್ಟೆಗಳು ಹಾಲು, ...ಶೇಂಗಾ.ಬೆಳೆ, ಹೆಸರುಬೆಳೆ ಈ ಎಲ್ಲಾ ಆಹಾರ ದಾನ್ಯಗಳು ... ಗಭಿಣಿತಾಯಿಗೆ ಹಾಗೂ ಬಾಣಂತಿಗೆ ದಿನಕ್ಕೆ 150 ಗ್ರಾಂ ...0ಗ್ರಾಂ ಬೆಳೆ,ತಿಂಗಳಿಗೆ 24 ರಿಂದ 25 ಮೊಟ್ಟೆಗಳು ...ಹಾಲಿನ ಪುಡಿ 15ಗ್ರಾಂ ಶೇಂಗ ಇದೆ ರೀತಿ ಮಕ್ಕಳಿಗೆ ...ಷ್ಟಿಕ ಆಹಾರ ನೀಡುವ ದೃಷ್ಟಿಯಿಂದ ಅಪೌಷ್ಟಿತಕತೆ ...ಲೊನೆ .ಮಕ್ಕಳ ಸರ್ವತೋಮುಖ ಬೆಳವಣಿಗೆ ...ರಲ್ಲಿ ರಕ್ತ ಹಿನತೆ ಕಡಿಮೆ ಮಾಡಲು ತಾಯಿಯ ಶಿಶು ...ಡೆಗಟ್ಟಲು ಸರಕಾರ ಈ ಯೋಜನೆ ಜಾರಿಗೆ ತಂದಿದ್ದು ...ದ ಸಂಗಾತಿ ಆದರೆ ಸರಕಾರದ ಹೇಳಿದ ಹಾಗೆ ಆಹಾರ ...ನ್ನು ಸರಬರಾಜು ಮಾಡುವದರಲ್ಲಿ ಸರಕಾರ ಸಂಪೂರ್ಣವಾಗಿ ...ವಾಗಿದೆ ಎಂದು ತೋರಣದಿನ್ನಿ ಹಾಗೂ ಪೋತ್ನಾಳ ಪಂಚಾಯತಿಗೆ ಒಳಪಡುವ ಗರ್ಭಿಣಿ ತಾಯಂದಿರು ಲೋಕಮಂಚ ನಾಯಕರ ಮತ್ತು ವಿಮುಕ್ತಿ ಸಂಸ್ಥೆ ಜೊತೆ ತಮ್ಮ ಅಳಲನ್ನು ತೊಡಿಕೊಂಡಿದ್ದಾರೆ. ಈವಿಷಯವನ್ನು ಗಂಭಿರವಾಗಿ ತೆಗಿದುಕೊಂಡ ವಿಮುಕ್ತಿ ಸಂಸ್ಥೆ ವಿತರಣೆಯಾಗಬೇಕಾದ ಆಹಾರ ದಾನ್ಯಗಳನ್ನು ವಿತರಿಸಲು ಮನವಿ ಪತ್ರದ ಮೂಲಕ ಪರಿಹಾರ ಕಂಡುಕೊಳ್ಳಲು ಮುಂದಾಗಿದ್ದಾರೆ. ಸಂಭದ ಪಟ್ಟ ಅಧಿಕಾರಿಗಳು ಇತ್ತಕಡೆ ಗಮನ ಹರಿಸಿ ಫಲಾನುಭವಿಗಳಿಗೆ ಸಿಗಬೇಕಾದ ಆಹಾರ ದಾನ್ಯಗಳು ತಲುಪಿಸುವಂತ ಕೆಲಸ ಮಾಡಬೇಕೆಂದು ಹೇಳಿದರು ಆದ್ದರಿಂದ ಲೋಕಮಂಚ್ ನಾಯಕರ ಹಾಗೂ ವಿಮುಕ್ತಿ ಸಂಸ್ಥೆ ಕಾರ್ಯಕರ್ತರು ತಿಳಿಸಿದ್ದಾರೆ.



## ಅಂಗನವಾಡಿ ಕೇಂದ್ರದಲ್ಲಿ ಆಹಾರ ವಿತರಣೆ ಪಟ್ಟಿ ಅಳವಡಿಸಲು ...

...ಪೋತ್ನಾಳ್,ಜ.18-ಮಾನ್ವಿ ಮತ್ತು ...ರವಾರ ತಾಲೂಕಿನ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿ ಬಾಣಂತಿ ಮಹಿಳೆಯರ ಮತ್ತು 0 ರಿಂದ 6 ತಿಂಗಳು ಮತ್ತು 6 ತಿಂಗಳಿನಿಂದ 3 ವರ್ಷದ ಹಾಗೂ ... ವರ್ಷದಿಂದ 6ವರ್ಷದ ಮಕ್ಕಳಿಗೆ ...ಶೋರಿಯರಿಗೆ ಸಾಧಾರಣ ಮತ್ತು ...ಾಮಾನ್ಯ ಮಕ್ಕಳಿಗೆ ತಮ್ಮ ಇಲಾಖೆ ...ತಿಯಿಂದ ಆಹಾರ ...ತರಣೆಯಾಗುವಲ್ಲಿ ಗೊಂದಲ ತಂದಿದ್ದು ...ರಕಾರ ನಿಗದಿ ಪಡಿಸಿದ ಪಟ್ಟಿಯನ್ನು ...ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ...ಅಳವಡಿಸಬೇಕು ಮತ್ತು ಕೇಂದ್ರದ ಪ್ರತಿ ...ಫಲಾನುಭವಿಗಳಿಗೆ ಹಂಚಿಕೆಯಾಗಬೇಕು ...ಎಂದು ಸಮೀಪದ ತೋರಣದಿನ್ನಿಯಲ್ಲಿ ...ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ತೋರಣದಿನ್ನಿ ವಲಯದ ಮೇಲ್ವಿಚಾರಕಿ ಮಾಂತಮ್ಮ ಇವರಿಗೆ ಜನವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ತಾಯಿ ಮತ್ತು ಮಗುವಿನ ರಕ್ಷಣೆ ಪೋಷಣೆ ಅಭಿಯಾನ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶಿಶು ಮರಣ ತಾಯಿ ಮರಣ ಮತ್ತು ಮಹಿಳೆಯರಲ್ಲಿ ರಕ್ತ ಹೀನತೆ ಮಕ್ಕಳಲ್ಲಿ ಅಪೌಷ್ಟಿಕತೆ ತಡೆಯಲು ಅಭಿಯಾನ ನಡೆಸಲಾಗುತ್ತಿದೆ. ಆದ್ದರಿಂದ ತಾವುಗಳು ಆದಷ್ಟು ಬೇಗ... ಆಹಾರ ಪಟ್ಟಿಯನ್ನು ತಮ್ಮ ವ್ಯಾಪ್ತಿಗ... ಬರುವ ಅಂಗನವಾಡಿ ಕೇಂದ್ರಗಳಲ್... ಅಳವಡಿಸಬೇಕು ಎಂದು ಜನವೇದಿಕೆಯ ಸದಸ್ಯರು ಮನವಿ ಮಾಡಿದರು.

ಆಹಾರ ಪಟ್ಟಿಯನ್ನು ಅಳವಡಿಸದಿದ್ದರೆ ಮುಂದಿನ ದಿನಗಳಲ್... ಸಂಬಂಧ ಪಟ್ಟ ಇಲಾಖೆಯ... ಮುಂದೆ ಫಲಾನುಭವಿಗಳೊಂದಿಗ... ಕಾನೂನು ಹೋರಾಟ... ಮಾಡಲಾಗುವುದು ಎಂದ... ಮನವಿಯಲ್ಲಿ ಎಚ್ಚರಿಕೆ ನೀಡಿದರು. ಈ... ಸಂದರ್ಭದಲ್ಲಿ ಮಲ್ಲಮ್ಮ ಯಲ್ಲಮ್... ಶಾಂತಮ್ಮ ಮಲ್ಲಮ್ಮ ಅಂಬಮ್ಮ ಈರಮ್... ಸರಸ್ವತಿ ಮರಿಯಮ್ಮ ಈಶವ... ಮುಂತಾದವರು ಭಾಗವಹಿಸಿದ್ದರು.



# ಜನವೇದಿಕೆ ಸದಸ್ಯರ ಲೋಕ್ ಮಂಚ್ ನಾಯಕರ ಸಭೆಗಳು







# ಜನವೇದಿಕೆ ಸದಸ್ಯರಿಂದ ಅಂಗನವಾಡಿಗಳ ಮೇಲ್ವಿಚಾರಣೆ









# ಲೋಕಮಂಚ್ ಹಾಗೂ ಜನವೇದಿಕೆ ಸದಸ್ಯರಿಂದ ಅಂಗನವಾಡಿ ಕೇಂದ್ರಗಳಲ್ಲಿ ಆಹಾರ ವಿತರಣಾ ಫಲಕ ಪಟ್ಟಿಯನ್ನು ಅಳವಡಿಸುವ ಬಗ್ಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸುವದು.








## ಅಂಗನವಾಡಿ ಕೇಂದ್ರದಲ್ಲಿ ಆಹಾರ ವಿತರಣೆ ಪಟ್ಟಿ ಅಳವಡಿಸಲು ಮನವಿ

...ತ್ನಾಳ್, ಜ.18 - ಮಾನ್ವಿ ಮತ್ತು ...ಾರ ತಾಲೂಕಿನ ಎಲ್ಲಾ ಅಂಗನವಾಡಿ ...ಂದ್ರಗಳಲ್ಲಿ ಗರ್ಭಿಣಿ ಬಾಣಂತಿ ...ಿಳೆಯರ ಮತ್ತು 0 ರಿಂದ 6 ತಿಂಗಳು ...ತ್ತು 6 ತಿಂಗಳಿನಿಂದ 3 ವರ್ಷದ ಹಾಗೂ ...ವರ್ಷದಿಂದ 6 ವರ್ಷದ ಮಕ್ಕಳಿಗೆ ...ೋರಿಯರಿಗೆ ಸಾಧಾರಣ ಮತ್ತು ...ಮಾನ್ಯ ಮಕ್ಕಳಿಗೆ ತಮ್ಮ ಇಲಾಖೆ ...ಯಿಂದ ಆಹಾರ ...ರಣೆಯಾಗುವಲ್ಲಿ ಗೊಂದಲ ತಂದಿದ್ದು ...ಕಾರ ನಿಗದಿ ಪಡಿಸಿದ ಪಟ್ಟಿಯನ್ನು ...ತಿ ಅಂಗನವಾಡಿ ಕೇಂದ್ರಗಳಲ್ಲಿ ...ವಡಿಸಬೇಕು ಮತ್ತು ಕೇಂದ್ರದ ಪ್ರತಿ ...ಾನುಭವಿಗಳಿಗೆ ಹಂಚಿಕೆಯಾಗಬೇಕು ...ದು ಸಮೀಪದ ತೋರಣದಿನ್ನಿಯಲ್ಲಿ ...ಹಿಳಾ ಮತ್ತು ಮಕ್ಕಳ ಕಲ್ಯಾಣ



ಇಲಾಖೆಯ ತೋರಣದಿನ್ನಿ ವಲಯದ ಮೇಲ್ವಿಚಾರಕಿ ಶಾಂತಮ್ಮ ಇವರಿಗೆ ಜನವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ತಾಯಿ ಮತ್ತು ಮಗುವಿನ ರಕ್ಷಣೆ ಪೋಷಣೆ ಅಭಿಯಾನ ಅಡಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಶಿಶು ಮರಣ ತಾಯಿ ಮರಣ ಮತ್ತು ಮಹಿಳೆಯರಲ್ಲಿ ರಕ್ತ ಹೀನತೆ ಮಕ್ಕಳಲ್ಲಿ ಅಪೌಷ್ಟಿಕತೆ ತಡೆಯಲು ಅಬಿಯಾನ ನಡೆಸಲಾಗುತ್ತಿದೆ.

ಆದ್ದರಿಂದ ತಾವುಗಳು ಆದಷ್ಟು ಬೇ... ಆಹಾರ ಪಟ್ಟಿಯನ್ನು ತಮ್ಮ ವ್ಯಾಪ್ತಿ... ಬರುವ ಅಂಗನವಾಡಿ ಕೇಂದ್ರಗಳ... ಅಳವಡಿಸಬೇಕು ಎಂದು ಜನವೇದಿಕೆಯ... ಸದಸ್ಯರು ಮನವಿ ಮಾಡಿದರು.

ಆಹಾರ ಪಟ್ಟಿಯನ್ನು... ಅಳವಡಿಸದಿದ್ದರೆ ಮುಂದಿನ ದಿನಗಳ... ಸಂಬಂಧ ಪಟ್ಟ ಇಲಾಖೆಯ... ಮುಂದೆ ಫಲಾನುಭವಿಗಳೊಂದಿ... ಕಾನೂನು ಹೋರಾ... ಮಾಡಲಾಗುವುದು ಎಂದು... ಮನವಿಯಲ್ಲಿ ಎಚ್ಚರಿಕೆ ನೀಡಿದರು. ಈ... ಸಂದರ್ಭದಲ್ಲಿ ಮಲ್ಲಮ್ಮ ಯಲ್ಲಮ್ಮ... ಶಾಂತಮ್ಮ ಮಲ್ಲಮ್ಮ ಅಂಬಮ್ಮ ಈರಮ್ಮ... ಸರಸ್ವತಿ ಮರಿಯಮ್ಮ ಈಶಮ್ಮ... ಮುಂತಾದವರು ಭಾಗವಹಿಸಿದ್ದರು.

# ಫಲಿತಾಂಶ

- ಅಭಿಯಾನದಲ್ಲಿ ಜನರ ಸಹಕಾರ ಕಂಡುಬಂದಿದೆ.
- ಆಜನವೇದಿಕೆ ಸದಸ್ಯರು ಹಾಗೂ ಲೋಕ್ ಮಂಚ್ ನಾಯಕರ ಪಾತ್ರ ಮುಖ್ಯವಾಗಿ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.
- ಆರೋಗ್ಯ ಇಲಾಖೆಯು ಫಲಾನುಭವಿಗಳಿಗೆ ಉತ್ತಮ ಸೇವೆಯನ್ನು ಒದಗಿಸಲು ಅಭಿಯಾನ ಸಹಾಕಾರಿಯಾಗಿತ್ತು.
- ಆರೋಗ್ಯ ಇಲಾಖೆಯಲ್ಲಿ ಖಾಲಿ ಇದ್ದಂತ ಸಿಬ್ಬಂದಿಗಳು ಹಾಗೂ ವೈದ್ಯಾಧಿಕಾರಿಗಳ ನೇಮಕ ಮಾಡಲು ಸಹಕಾರಿಯಾಗಿತ್ತು.
- ಅಂಗನವಾಡಿಯಲ್ಲಿ ನಡೆಯುವ ಗರ್ಭೀಣಿ ಹಾಗೂ ಭಾಣಂತಿಯರಿಗೆ ಸಿಗುವ ಮಾತ್ರ ಪೂರ್ಣಯೋಜನೆ, ಮಾತೃ ವಂದನಾ ಇನ್ನಿತರ ಸೌಲಭ್ಯಗಳು ದೊರೆಯಲು ಸಹಕಾರವಾಗಿತು.
- ಅಭಿಯಾನದಿಂದ ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ವಿತರಿಸುವ ಆಹಾರ ಧಾನ್ಯಗಳ ಪ್ರಮಾಣ ಪಟ್ಟಿಯನ್ನು ಪ್ರದರ್ಶಿಸಲು ಸಹಕಾರಿಯಾಯಿತು.
- ಆಜನರು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಅಭಿಯಾನವು ಒಂದು ವೇದಿಕೆಯಾಗಿತ್ತು.

# ಫಲಿತಾಂಶ

- ಸಾಮಾನ್ಯ ಖಾಯಿಲೆಗಳಾದ ಬಿ.ಪಿ, ಮದುಮೇಹ, ಇನ್ನಿತರ ಖಾಯಿಲೆಗಳಿಗೆ ಔಷಧಿಗಳನ್ನು ಪಡೆದುಕೊಳ್ಳುವಂತವರಾಗಿದ್ದಾರೆ.
- ಗ್ರಾಮ ಭಾಗಗಳಲ್ಲಿ ಆಶಾ ಕಾರ್ಯಕರ್ತರ ಹಾಗೂ ಆರೋಗ್ಯ ಇಲಾಖೆಯ ಸೇವೆಗಳು ನಿರಂತರವಾಗಿ ಸಿಗುವಲ್ಲಿ ಅಭಿಯಾನ ಸಹಕಾರಿಯಾಗಿದೆ.
- ತಾಯಿ ಮರಣ ಹಾಗೂ ಶಿಶು ಮರಣಗಳು ಅಭಿಯಾನದಿಂದ ಕಡಿಮೆಯಾಗಿರುವದು ಕಂಡುಬರುತ್ತದೆ.
- ಜನವೇದಿಕೆ ಸದಸ್ಯರು ಹಾಗೂ ಲೋಕ್ ಮಂಚ್ ನಾಯಕರು ಅಧಿಕಾರಿಗಳೊಂದಿಗೆ ನಿರಂತರ ಒಡನಾಟಯುಳ್ಳವರಾಗಿದ್ದಾರೆ.

# ಸವಾಲುಗಳು

- ಗರ್ಭಿಣಿ ತಾಯಂದಿರು ಖಾಸಗಿ ಆಸ್ಪತ್ರೆಗಳ ಮೊರೆಹೋಗುವದು.
- ಜನರಲ್ಲಿ ಮುಂದಾಳತ್ವದ ಕೊರತೆ.
- ಆರೋಗ್ಯ ಇಲಾಖೆ ಹಾಗೂ ಅಂಗನವಾಡಿ ಇಲಾಖೆಯ ಸ್ಪಂದನೆ ಕೊರತೆ.
- ಸಮುದಾಯದ ಜನರು ಕೂಲಿಯನ್ನರಸಿ ದೊಡ್ಡ ದೊಡ್ಡ ನಗರಗಳಿಗೆ ವಲಸೆ ಹೋಗುವದು.
- ಜನರು ಮೂಢನಂಬಿಕೆಗೆ ಒಳಗಾಗುವದು.
- ಫಲಾನುಭವಿಗಳು ಸೌಲಭ್ಯಗಳನ್ನು ಪಡೆಯಲು ದಾಖಲಾತಿಗಳ ಕೊರತೆ ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆಗಳು ಅನುಷ್ಠಾನಗೊಳ್ಳದೇ ಇರುವದು ಮತ್ತು ಅಧಿಕಾರಿಗಳ ನಿರ್ಲಕ್ಷದೋರಣೆ ಅನುಸರಿಸುವದು.
- ಅಸಂಘಟಿತ ಯುವಕ ಯುವತಿಯರಲ್ಲಿ ಸರ್ಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ಸ್ವಾರ್ಥ ಭಾವನೆಗೆ ಒಳಗಾಗುವದು.
- ಆರೋಗ್ಯ ಇಲಾಖೆಯು ಸೇವೆಗಳನ್ನು ಒದಗಿಸುವಲ್ಲಿ ವಿಳಂಬ.
- ಅಂಗನವಾಡಿ ಕಾರ್ಯಕರ್ತರು ಎರಡು ಎರಡು ಅಂಗನವಾಡಿಗಳಲ್ಲಿ ಕೆಲಸ ನಿರ್ವಹಿಸುವದ್ದರಿಂದ ಸೌಲಭ್ಯಗಳು ಒದಗಿಸುವಲ್ಲಿ ಕೊರತೆ.

# ಯೋಜನೆಯಿಂದ ಕಲಿಕೆ

# (key learning from the project)

- ಮೂರು ಸಂಸ್ಥೆಗಳ ಸಹಯೋಗದಲ್ಲಿ ಜನರನ್ನು ಒಗ್ಗೂಡಿಸಲು ಸಹಕಾರಿಯಾಗಿತು.
- ಜನರಲ್ಲಿ ಯಾವ ಯಾವ ರೀತಿಯ ಆರೋಗ್ಯ ತೊಂದರೆ ಹಾಗೂ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ ಎಂಬುದರ ಕುರಿತು ತಿಳಿಯಲಾಯಿತು.
- ಅಧಿಕಾರಿಗಳ ಹಾಗೂ ಜನರ ಒಡನಾಟ ಬೆಳೆಸಲಾಯಿತು.
- ಅಧಿಕಾರಿಗಳ ಸಮಸ್ಯೆಗಳನ್ನು ಗುರುತಿಸಲು ಸಹಾಯವಾಗಿತ್ತು.
- ಆರೋಗ್ಯ ಇಲಾಖೆಯ ವ್ಯವಸ್ಥೆಯ ಬಗ್ಗೆ ಕಲಿಕೆಯಾಗಿತ್ತು.
- ಗರ್ಭಿಣಿ ಬಾಣಂತಿಯರಲ್ಲಿ ಇರುವ ಆರೋಗ್ಯ ಸಮಸ್ಯೆಗಳನ್ನು ಚಾರ್ಟ್‌ಗಳ ಮುಖಾಂತರ ಶೇಕಡಾವಾರು ಗುರುತಿಸುವದು ಕಲಿಕೆಯಾಗಿದೆ.
- ತಾಯಿ ಮರಣ ಹಾಗು ಶಿಶುಮರಣಗಳ ಸಾಮಾಜಿಕ ಲೆಕ್ಕಪರಿಶೀಲನೆಯ ಮಾಡುವದು ಕಲಿಕೆಯಾಯಿತು.
- ಯಶೋಗಾಥೆಗಳನ್ನು ಬರೆಯುವ ವಿಧಾನ ಕಲಿಕೆಯಾಗಿತ್ತು.


ಧನ್ಯವಾದಗಳು